

**ಇತ್ತೀಚೆಗೆ ನಿಧನರಾದ ಲೇಖಕ ರಂ.ಶಾ. ಲೋಕಾಪುರ (ಜುಲೈ 13, 1932– ನವೆಂಬರ್ 19, 2019) ಅವರ ಸಾಹಿತ್ಯ ಮತ್ತು ವ್ಯಕ್ತಿತ್ವವನ್ನು ಪರಿಚಯಿಸುವ ಬರಹ ಇಲ್ಲಿದೆ.**

‘ರಂ.ಶಾ. ಹೋದರು’ ಎನ್ನುವ ಸುದ್ದಿ ಅನಿರೀಕ್ಷಿತವಾಗಿರಲಿಲ್ಲವಾದರೂ ಮನಸ್ಸಿಗೆ ವ್ಯಥೆಯಾಯಿತು. ರಂ.ಶಾ. ಹುಟ್ಟಿದ ದಿನ (ಜುಲೈ 13) ಅವರ ಪುಣೆಯ ಮನೆಗೆ ಫೋನ್ ಮಾಡಿದ್ದೆ. ಅವರ ಮಗ ಇದ್ದರು. ತಂದೆಯ ಕೈಗೆ ಫೋನ್ ಕೊಟ್ಟರು. ರಂ.ಶಾ. ಕ್ಷೀಣ ಧ್ವನಿಯಲ್ಲಿ ‘ಇನ್ನೇನು, ಎಲ್ಲ ಮಗಿದ್ಹಾಂಗ ಕಾಣಸ್ತದ’ ಎಂದಿದ್ದರು. ನಾನು ‘ಅದ್ಹೆಂಗ ಮುಗಿತದ್ರಿ? ಇನ್ನೂ ಏನೇನೋ ಉಳದಾವು’ ಎಂದೆ. ನಕ್ಕರು ರಂ.ಶಾ. ‘ಸಾವನ್ನು ಯಾರೂ ಸಾಯಿಸಲಾರರು. ಅದೊಂದೇ ಜಗತ್ತಿನಲ್ಲಿರುವ ಚಿರಂಜೀವಿ ವಸ್ತು’ ಎಂದಿದ್ದರು. ಧ್ವನಿಯಲ್ಲಿ ಸುಸ್ತು ಇತ್ತು.

ರಂಗನಾಥಾಚಾರ್ಯ ಶಾಮಾಚಾರ್ಯ ಲೋಕಾಪುರ ಹುಟ್ಟಿದ್ದು (ಜುಲೈ 13, 1932) ಆಗಿನ ಅಖಂಡ ವಿಜಯಪುರ ಜಿಲ್ಲೆ ಮತ್ತು ಈಗಿನ ಬಾಗಲಕೋಟೆ ಜಿಲ್ಲೆಯ ಹುನ್ನೂರ ಗ್ರಾಮದಲ್ಲಿ. ಮನೆಯಲ್ಲಿ ಅಪ್ಪಟ ಮಾಧ್ವ ಮಡಿ ಸಂಪ್ರದಾಯಗಳು. ಅವರ ತಂದೆ ಶಾಮಾಚಾರ್ಯ ಪ್ರಾಥಮಿಕ ಶಾಲೆಯ ಶಿಕ್ಷಕರಾಗಿದ್ದರು. 1934ರಲ್ಲಿ ಅವರಿಗೆ ಬೆಳಗಾವಿಗೆ ವರ್ಗವಾಯಿತು. ರಂ.ಶಾ. ಅವರ ಬಾಲ್ಯ, ಶಿಕ್ಷಣವೆಲ್ಲ ಬೆಳಗಾವಿಯಲ್ಲೇ ಕಳೆಯಿತು. ಅವರ ತಂದೆ ಶಾಮಾಚಾರ್ಯರಿಗೆ ಆಗಿನ ಪ್ರಕಾಂಡ ಪಂಡಿತರಾದ ಪ್ರ.ಗೋ. ಕುಲಕರ್ಣಿಯವರಲ್ಲಿ ಸಲುಗೆ. ಪ್ರ.ಗೋ. ಕುಲಕರ್ಣಿ ಕನ್ನಡ ಮತ್ತು ಸಂಸ್ಕೃತ ವ್ಯಾಕರಣ ವಿಶಾರದರು. ಅವರ ಸಂಗ್ರಹದಲ್ಲಿ ಹಳಗನ್ನಡದ ಅನೇಕಾನೇಕ ಪುಸ್ತಕಗಳಿದ್ದವು. ಬಾಲಕ ರಂಗನಾಥ ಆ ಪುಸ್ತಕಗಳನ್ನೆಲ್ಲ ಓದಿ ಕನ್ನಡ ಸಾಹಿತ್ಯದ ಬಗ್ಗೆ ಪ್ರೀತಿ, ಅಭಿಮಾನವನ್ನು ಬೆಳೆಸಿಕೊಂಡ; ಆಗ ಹಿಂದಿ ಭಾಷೆ ಶಾಲೆಯಲ್ಲಿ ಕಡ್ಡಾಯವಾಗಿ ಕಲಿಯುವ ಭಾಷೆಯಾಗಿತ್ತು. ವಿದ್ಯಾರ್ಥಿ ರಂಗನಾಥ ಹಿಂದಿಯನ್ನೂ ಕಲಿತ. ಅವರು ಹೈಸ್ಕೂಲು ವಿದ್ಯಾರ್ಥಿಯಾಗಿದ್ದಾಗಲೇ ಹಿಂದಿಯ ಶ್ರೇಷ್ಠ ಲೇಖಕ ಪ್ರೇಮಚಂದರ ಎಂಟು ಕತೆಗಳನ್ನು ಕನ್ನಡಕ್ಕೆ ಅನುವಾದಿಸಿದ್ದರು. ಬೆಳಗಾವಿಯಲ್ಲಿ ಹೈಸ್ಕೂಲು ಮುಗಿಸಿದ ರಂಗನಾಥ ಕಾಲೇಜಿಗೆಂದು ಕೊಲ್ಹಾಪುರದ ರಾಜಾರಾಮ ಕಾಲೇಜು ಸೇರಿ 1953ರಲ್ಲಿ ಬಿ.ಎಸ್‌ಸಿ. ಪದವಿ ಪಡೆದರು. 1954ರಲ್ಲಿ ಅವರಿಗೆ ಮಹಾರಾಷ್ಟ್ರ ಸರಕಾರದ ಅಕೌಂಟಂಟ್ ಜನರಲ್ ಕಚೇರಿಯಲ್ಲಿ ಲೆಕ್ಕ ಪರಿಶೋಧಕ ನೌಕರಿ ಸಿಕ್ಕಿತು; ಅಂದಿನಿಂದ ಅವರಿಗೆ ಮಹಾರಾಷ್ಟ್ರವೇ ನೆಲೆಯಾಯಿತು.